ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :15/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ದೊರೆಸ್ವಾಮಿ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಚಿನ್ನಪ್ಪ | **27.12.2023** |
| ವಯಸ್ಸು | : | 48 ವರ್ಷ | |
| ವೃತ್ತಿ | : | ವ್ಯವಸಾಯ | ಪಿ.ಡಬ್ಲೂಃ 6 |
| ವಾಸಸ್ಥಳ | : | ತಗಡೂರು | ಸಿ.ಡಬ್ಲೂಃ 7 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ . ಪ್ರಾಸಾ 1 , 2 , 5 ರವರ ಪರಿಚಯವಿದೆ. ದಿಃ 19.06.2020 ರಂದು ಕವಲಂದೆ ಪೊಲೀಸರು ನನಗೆ ನೋಟೀಸ್ ಜಾರಿ ಮಾಡಿದ್ದರ. ಆ ಪ್ರಕಾರ ಮಧ್ಯಾಹ್ನ 12 ಗಂಟೆಗೆ ಪೊಲೀಸ್ ಠಾಣೆಗೆ ಹೋದೆ. ನಾವು ಹೋದಾಗ ನ್ಯಾಯಾಲಯದ ಮುಂದಿರುವ ಆರೋಪಿಯ ಠಾಣೆಯಲ್ಲಿ ಇದ್ದ. ಠಾಣೆಯಿಂದ ಸರ್ಕಾರಿ ಜೀಪಿನಲ್ಲಿ ನಮ್ಮನ್ನು ಹಾಗೂ ಆರೋಪಿಯನ್ನು ಪೊಲೀಸರು ಕೂರಿಸಿಕೊಂಡು ಸಿದ್ದಲಿಂಗೇಶ್ವರ ಪಾರ್ಮ ಹೌಸಗೆ ಕರೆದುಕೊಂಡು ಬಂದರು. ಜೀಪಿನಿಂದ ಆರೋಪಿಯನ್ನು ಇಳಿಸಿ ಪೊಲೀಸ್ ಅಧಿಕಾರಿಯವರು ಆರೋಪಿಯನ್ನು ವಿಚಾರಿಸಿದಾಗ ಆರೋಪಿ ಮುಂದೆ ಮುಂದೆ ಹೋದ ನಾವು ಅವನ ಹಿಂದೆ ಹೋದೆವು. ಬಾಳೆತೋಟದಲ್ಲಿ ಹೋದಾಗ ಮೊದಲು ಒಂದು ಹಸಿರು ಬಣ್ಣದ ಸ್ವೆಟರ್ ಸಿಕ್ಕಿತು . ಸ್ವಲ್ಪ ಮುಂದೆ ಹೋದಾಗ ಒಂದು ಮಚ್ಚು ಸಿಕ್ಕಿತು. ಆ 2 ವಸ್ತುಗಳನ್ನು ಆರೋಪಿ ಮುಂದೆ ಹೋಗಿ ತೋರಿಸಿದ್ದು , ಪೊಲೀಸರು ಅವುಗಳನ್ನು ಪಿ ಎಂಬ ಅಕ್ಷರದಿಂದ ಗುರುತಿಸಿ ವಶಕ್ಕೆ ಪಡೆದರು. ಆಗ ನಮ್ಮ ಸಹಿ ಪಡೆದಿದ್ದಾರೆ. ಈಗ ನಾನು ನೋಡುತ್ತಿರುವ ದಾಖಲೆ ನೋಟೀಸ್ ಆಗಿದ್ದು ಅದನ್ನು ನಿಪಿ.–10

ಎಂದು, ಸಾಕ್ಷಿಯ ಸಹಿಯನ್ನು ನಿಪಿ.– 10 (ಎ) ಎಂದು ಗುರುತಿಸಲಾಯಿತು.

2. ಆ ದಿನ ಮಧ್ಯಾಹ್ನ 12.30 ರಿಂದ 1.30 ಅಥವಾ 1.45 ರವರೆಗೆ ಸ್ಥಳದಲ್ಲಿ ಪಂಚನಾಮೆ ಮಾಡಿದ್ದು, ಸ್ಥಳದಲ್ಲಿ ನಾನು, ಪ್ರಾಸಾ 5 ಹಾಗೂ ಚಾಸಾ 5 ಸಹಿ ಮಾಡಿದ್ದೇವು. ಚಾಸಾ 5 ಮರಣ ಹೊಂದಿದ್ದಾರೆ. ನಿಪಿ. 9 ರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ 9 (ಬಿ ) ಎಂದು ಗುರುತಿಸಲಾಯಿತು. ಮು. ಮಾ. 1 ಮತ್ತು 2 ಆ ದಿನ ವಶಕ್ಕೆ ಪಡೆದುಕೊಂಡಂತಹ ಮಚ್ಚು ಹಾಗೂ ಸ್ವೇಟರಗಳಾಗಿವೆ. ಮು. ಮಾ. 1 ಮತ್ತು 2 ರ ಮೇಲೆ ಹಚ್ಚಿದ ಚೀಟಿಗಳ ಮೇಲೆ ನನ್ನ ಸಹಿ ಇದೆ. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ಸ್ವೇಟರ್ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

3. ಘಟನೆಯ ದಿನ ಆರೋಪಿ ಮು. ಮಾ. 2 ಸ್ವೇಟರ್ ನ್ನು ಹಾಕಿಕೊಂಡಿದ್ದೆ ಎಂದು ಹೇಳಿದ್ದರಿಂದ ಪೊಲೀಸರು ವಶಕ್ಕೆ ಪಡೆದರು ಎಂದರೆ ನಿಜ. ನಿಪಿ. 9 ಕ್ಕೆ ಆರೋಪಿ ಸಹ ಸಹಿ ಮಾಡಿದ್ದಾರೆ ಎಂದರೆ ನಿಜ. ಚಾಸಾ– 5 ನಿಪಿ. 9 ಕ್ಕೆ ಸಹಿ ಮಾಡಿಲ್ಲ ಎಂದರೆ ಇರಬಹುದು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಎಮ್ ಎನ್ ರವರಿಂದಃ**

4. ಮು. ಮಾ. 1 ಮತ್ತು 2 ನ್ನು ತೋಟದ ಒಳಗೆ ಜಪ್ತು ಮಾಡಿಕೊಂಡರು. ಮಚ್ಚನ್ನು ತೋರಿಸಿದಾಗ ಪೊಲೀಸರು ಬಟ್ಟೆಯಲ್ಲಿ ಹಾಕಿಕೊಂಡು ವಶಕ್ಕೆ ಪಡೆದರು. ಸ್ವೇಟರ್ ನ್ನು

ಪೊಲೀಸರು ವಶಕ್ಕೆ ಪಡೆದಾಗ ನಾನು ಸ್ವತಃ ಬಿಚ್ಚಿ ನೋಡಿಲ್ಲ. ಮು. ಮಾ. 2 ತರಹ ಸ್ವೇಟರನ್ನೆ ಆ ದಿನ ವಶಕ್ಕೆ ಪಡೆದರು. ಪೊಲೀಸರು ನನ್ನ ಹೇಳಿಕೆಯನ್ನು ಸ್ಥಳದಲ್ಲಿಯೇ ಪಡೆದರು. ನನ್ನ ಹೇಳಿಕೆಯನ್ನು ಕೈಯಿಂದ ಬರೆದುಕೊಂಡಿದ್ದಾರೆ , ಬೆರಳಚ್ಚು ಮಾಡಿಲ್ಲ. ಪ್ರಾಸಾ 2 ಆ ದಿನ ಮು. ಮಾ. 1 ಮತ್ತು 2 ನ್ನು ತಂದು ಕೊಟ್ಟರು ಎಂದರೆ ಗೊತ್ತಿಲ್ಲ , ಸ್ಥಳ ದಿಂದ ತೆಗೆದುಕೊಂಡಿದ್ದು ಮಾತ್ರ ತೆಗೆದುಕೊಂಡಿದ್ದು ಗೊತ್ತಿದೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ ಜೀಪಿನಲ್ಲಿ ನಾವು ಪ್ರಯಾಣ ಮಾಡುವಾಗ ಹಾಗೂ ಸ್ಥಳಕ್ಕೆ ಬಂದ ನಂತರ ಆರೋಪಿ ನಮಗೆ ಏನನ್ನೂ ಹೇಳಿಲ್ಲ. ಆರೋಪಿ ಆ ದಿನ ಸ್ಥಳವನ್ನಾಗಲೀ ಅಥವಾ ಮು. ಮಾ. 1 ಮತ್ತು 2 ನ್ನಾಗಲೀ ತೋರಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಪಂಚನಾಮೆ ಮಾಡುವಾಗ ಗ್ರಾಮದವರಾದ ನನ್ನ ಸಹಿ ಬೇಕು ಎಂದಿದ್ದಕ್ಕೆ ಸಹಿ ಮಾಡಿದ್ದೇನೆ. ನಿಪಿ. 9 ರಲ್ಲಿ ಬರೆದ ವಿಷಯವನ್ನು ಓದಿ ಹೇಳಿಲ್ಲ. ಆರೋಪಿ ಸ್ಥಳ ತೋರಿಸಿಲ್ಲ ಹಾಗೂ ಮು. ಮಾ. 1 ಮತ್ತು 2 ನ್ನು ತೋರಿಸಿಲ್ಲ ಎಂದರೂ ಸಹ ಪೊಲೀಸರು ಮಾಡಿದ ಪಂಚನಾಮೆಗೆ ಸಹಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸ ಇ ಎ ಒ.,**

27.12.2023

(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.